ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಶಿವಾನಂದ ನಾಯಕ್: ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. 1994ರಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೊಯಿಲಿಯವರ ಶಿಫಾರಸು ಪತ್ರ ಕೂಡ ಇಲ್ಲಿದೆ. ಆ ಶಾಲೆಗಾಗಿ 10 ಎಕರೆ ಜಮೀನು ಕೂಡ ಮಂಜೂರಾತಿ ಆಗಿದೆ. ಹಾಗೂ ಅದಕ್ಕೆ ಬೇಕಾಗಿರುವ ಠೇವಣಿ ಹಣವನ್ನು ಕೂಡ ಸಂಗ್ರಹ ಮಾಡಿದ್ದಾರೆ. ಆ ಭಾಗದಲ್ಲಿ ಸುಮಾರು 18 ಕಿ.ಮೀ. ದೂರದಲ್ಲಿ ಯಾವ ಶಾಲೆಗಳೂ ಇಲ್ಲ. ಅಲ್ಲಿ ವಾಸಿಸುವಂಥ ಜನರು ಗುಡ್ಡಗಾಡು ಜನರು ಆಗಿದ್ದಾರೆ. ಆದ್ದರಿಂದ ಆ ಶಾಲೆಗೆ ಈ ವರ್ಷ ಮಂಜೂರಾತಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಪರಿಶೀಲನೆ ಮಾಡಿ ನೋಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಸದಸ್ಯರು ಹತ್ತಿರದಲ್ಲಿ ಯಾವುದೇ ಹೈಸ್ಕೂಲ್ ಇಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ. ಅವಶ್ಯಕತೆ ಇದ್ದರೆ ಖಂಡಿತವಾಗಿ ಕೊಡುತ್ತೇವೆ. ಏಕೆಂದರೆ ಸರ್ಕಾರದ ಉದ್ದೇಶ ಕೂಡ ಈ ನಿಟ್ಟಿನಲ್ಲಿ ಇರುವುದರಿಂದ ಇದನ್ನು ಪರಿಶೀಲನೆ ಮಾಡಿ ನೋಡುತ್ತೇವೆ.

ಚಾಮರಾಜನಗರದಲ್ಲಿ ಕೊಳವೆ ಬಾವಿಗಳು ಕೆಟ್ಟಿರುವುದು

25 (76)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರವೂ ಸೇರಿದಂತೆ ಚಾಮರಾಜನಗರದಲ್ಲಿ ಸುಮಾರು 300ಕ್ಕೂ ಹೆಚ್ಚು ಕೊಳವೆಬಾವಿಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕರ್ನಾಟಕ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳನ್ನು ದುರಸ್ತಿಮಾಡಲು ಸರ್ಕಾರದವರು ಕೈಗೊಂಡಿರುವ ತೀವ್ರ ಕ್ರಮಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಫೆಬ್ರವರಿ 98ರಲ್ಲಿ, ಚಾಮರಾಜನಗರ ತಾಲ್ಲೂಕಿನಲ್ಲಿ ಒಟ್ಟು 251 ಕೈಪಂಪುಗಳು ಕೆಟ್ಟಿದ್ದು, ಅವುಗಳ ಪೈಕಿ 159 ಕೈಪಂಪುಗಳನ್ನು ಸದರಿ ತಿಂಗಳ ಅಂತ್ಯಕ್ಕೆ ದುರಸ್ತಿಗೊಳಿಸಲಾಗಿದೆ. ಇನ್ನುಳಿದ 92 ಕೈಪಂಪುಗಳನ್ನು ಆದ್ಯತೆ ಮೇಲೆ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಕೈಪಂಪು ಕೊಳವೆಬಾವಿಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ಅಗತ್ಯ ಅನುದಾನವನ್ನು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಲಾಗಿದೆ. ಸಣ್ಣ ಪ್ರಮಾಣದ ದುರಸ್ತಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯೇ ಮಾಡಿಕೊಳ್ಳುತ್ತದೆ. ದೊಡ್ಡ ಪ್ರಮಾಣದ ದುರಸ್ತಿ ಕೆಲಸವನ್ನು ಸಂಬಂಧಪಟ್ಟ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗವು ಸಂಚಾರಿ ವಾಹನದ ಮೂಲಕ ಕೈಗೊಳ್ಳುತ್ತದೆ. ದುರಸ್ತಿ ಕೆಲಸಗಳನ್ನು ವಿಳಂಬವಿಲ್ಲದೆ ಕೈಗೊಳ್ಳಲು ಮತ್ತು ಕೈಪಂಪುಗಳನ್ನು ಸುಸ್ಥಿತಿಯಲ್ಲಿಡಲು ಜಿಲ್ಲಾಪಂಚಾಯತ್‌ಗಳಿಗೆ ನಿರ್ದೇಶಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, 251 ಕೈ ಪಂಪುಗಳು ಕೆಟ್ಟಿದೆ ಎಂದು ಹೇಳುತ್ತಾರೆ. 300 ಕೆಟ್ಟಿರತಕ್ಕಂಥಾದ್ದು ನಿಜ. ಮತ್ತು 150 ಕೈಪಂಪುಗಳನ್ನು ರಿಪೇರಿ ಮಾಡಿದ್ದೇವೆಂದು ಹೇಳಿದ್ದಾರೆ. ಕೇವಲ 10 ಕೈಪಂಪುಗಳು ನಿನ್ನೆಯವರೆಗೂ ರಿಪೇರಿ ಆಗಿರುವುದಿಲ್ಲ. 10 ಕೊಳವೆಬಾವಿಗಳು ರಿಪೇರಿ ಆಗಿಲ್ಲ. ನನ್ನ ಒಂದು ಕ್ಷೇತ್ರದಲ್ಲಿ 250-300 ಕೊಳವೆಬಾವಿಗಳು ಕೆಟ್ಟರೆ, ಇಡೀ ಕರ್ನಾಟಕದಲ್ಲಿ ಕನಿಷ್ಟ ಎರಡೂವರೆ ಲಕ್ಷ, ಮೂರು ಲಕ್ಷ ಕೊಳವೆಬಾವಿಗಳು ಕೆಟ್ಟಿವೆ. ಈ ರೀತಿ 3 ಲಕ್ಷ ಕೊಳವೆ ಬಾವಿ ಕೆಟ್ಟಾಗ, ಇವುಗಳ ರಿಪೇರಿಯನ್ನು ತಿಂಗಳಾನುಗಟ್ಟಲೆ ಮಾಡಲಿಲ್ಲವೆಂದರೆ ಜನಗಳಲ್ಲಿ ಏನು ಭಾವನೆ ಬರುತ್ತದೆ? ಇದು ಬೇಸಿಗೆ ಕಾಲ, ಕುಡಿಯುವ ನೀರಿನ ಪರಿಸ್ಥಿತಿ ಏನು? ಇದರ ಬಗ್ಗೆ ಸರ್ಕಾರ ತ್ವರಿತವಾಗಿ, ರಿಪೇರಿ ಮಾಡತಕ್ಕ ವ್ಯವಸ್ಥೆ ಏನು ಮಾಡಿದೆ ಎಂಬುದನ್ನು ತಾವು ಹೇಳಬೇಕು. ಬರೀ ಅಧಿಕಾರಿಗಳ ವರದಿ ತರಿಸಿಕೊಂಡು ಹೇಳಿದರೆ ಆಗುವುದಿಲ್ಲ. ನನ್ನ ವರದಿ ಸ್ಪಷ್ಟ. ನನ್ನ ಕ್ಷೇತ್ರದಲ್ಲಿ 10 ಕೊಳವೆಬಾವಿ ರಿಪೇರಿ ಆಗಿಲ್ಲ. ಇದರ ಬಗ್ಗೆ ತಾವೇನು ಹೇಳುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಬರೀ ಅಧಿಕಾರಿಗಳ ವರದಿಯ ಮೇಲೆ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ತಾವು ಯಾವ ಅಧಿಕಾರಿಯನ್ನು ಹೇಳುತ್ತೀರಿ, ಆ ಅಧಿಕಾರಿಯನ್ನು ಈ ದಿವಸವೇ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ, 1,764 ಕೈಪಂಪುಗಳು ಈ ತಾಲ್ಲೂಕಿನಲ್ಲಿ ದುರಸ್ತಿಯಲ್ಲಿದ್ದು, ಅದರಲ್ಲಿ 1,672 ಕೈಪಂಪುಗಳನ್ನು ಈಗಾಗಲೇ ದುರಸ್ತಿ ಮಾಡಲಾಗಿದೆ. ಇನ್ನು 92 ಕೈಪಂಪುಗಳನ್ನು ದುರಸ್ತಿ ಮಾಡಬೇಕಾಗಿರುತ್ತದೆ. ನಿಮ್ಮ ತಾಲ್ಲೂಕಿಗೆ ಈಗಾಗಲೇ ಕೊಟ್ಟಿರತಕ್ಕಂಥ 6 ಲಕ್ಷದ

74ಸಾವಿರ ರೂಪಾಯಿಗಳಲ್ಲಿ ಸಂಪೂರ್ಣ ಹಣ ಖರ್ಚಾಗಿದೆ. ಉಳಿದ ಕೆಲಸಗಳಿಗೂ ಬರತಕ್ಕ ಆಯವ್ಯಯದಲ್ಲಿ ಹಣವನ್ನು ಒದಗಿಸಿಕೊಡಿ ಎಂದು ಹೇಳಿದ್ದೇವೆ. ಎರಡು ಸಂಚಾರಿ ವಾಹನ ಘಟಕಗಳು ಕೂಡ ಈ ದುರಸ್ತಿ ಸಂದರ್ಭದಲ್ಲಿ ಇವೆ. ಅಕಸ್ಮಾತ್ ನನಗೆ ತಪ್ಪು ಮಾಹಿತಿ ಬಂದಿದ್ದರೆ, ನಾನು ಕ್ಷಮೆ ಯಾಚಿಸುವುದು ಒಂದೇ ಅಲ್ಲ, ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳುತ್ತೇನೆ. ತಾವು ಯಾವ ಅಧಿಕಾರಿಯನ್ನು ಹೇಳುತ್ತೀರೋ, ಆ ಅಧಿಕಾರಿಯನ್ನು ಈ ದಿವಸವೇ ಕಳುಹಿಸಿಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಈ ಬಗ್ಗೆ ಹಿಂದೆಯೂ ಕೂಡ ಸದನದಲ್ಲಿ ಚರ್ಚೆ ಮಾಡಿದ್ದೇವೆ, ತಮಗೂ ಗೊತ್ತಿದೆ; ಇದು ತಮ್ಮ ಗಮನದಲ್ಲೂ ಇರಬಹುದು. ನಾನು ಸಚಿವರ ಬಗ್ಗೆ ಅಗೌರವವಾಗಿ ಅಥವಾ ಅವರ ಬಗ್ಗೆ ವಿರುದ್ಧವಾಗಿ ಮಾತನಾಡಬೇಕೆಂದಲ್ಲ. ಪ್ರಾಮಾಣಿಕವಾಗಿ ಹೇಳುತ್ತೇನೆ, ಇದೊಂದು ಕಣ್ಣೀರಿನ ಕಥೆ. ಗ್ರಾಮಗಳಲ್ಲಿ ಕೊಳವೆ ಬಾವಿ ಕೆಟ್ಟರೆ ಏನು ಮಾಡಬೇಕು. ನಾವೆಲ್ಲಾ ಚುನಾವಣೆಗೆ ನಿಲ್ಲಬೇಕಾಗಿದೆ. ಈ ಕೊಳವೆ ಬಾವಿಗಳಿಂದ ಜನಗಳಲ್ಲಿ ಒಂದು ಕೆಟ್ಟ ಭಾವನೆ, ಒಂದು ಪರಿಣಾಮ ಬೀರುತ್ತಾ ಇದೆ. ನನಗನಿಸುತ್ತದೆ, ಇದು ನಿಜವಾಗಿಯೂ ಕೂಡ ನನಗೆ ತೃಪ್ತಿಯಾಗಿಲ್ಲ. ನಾನು ಖಂಡಿತ ಧರಣಿ ಮಾಡುತ್ತೇನೆ.

ಅಧ್ಯಕ್ಷರು: ಇವತ್ತೇ ನೀವು ಹೇಳಿದ ಅಧಿಕಾರಿಯನ್ನು ಕಳುಹಿಸುತ್ತೇನೆಂದು ಹೇಳಿದ್ದಾರೆ. ನಿಮ್ಮನ್ನು ಗೆಲ್ಲಿಸತಕ್ಕ ಎಲ್ಲಾ ವ್ಯವಸ್ಥೆಯನ್ನು ಅವರೆಲ್ಲರೂ ಸೇರಿ ಮಾಡುತ್ತಾ ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರ ಗತಿಯೇ ಈ ರೀತಿಯಾದರೆ, ಇನ್ನು ನಮ್ಮಗಳ ಗತಿ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಅವರು ಒಳಗೊಳಗೇ ಹೊಂದಿಕೊಂಡು, ಬಹಿರಂಗವಾಗಿ ಈ ರೀತಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಹೊಂದಾಣಿಕೆ ಇದ್ದರೆ ನಮಗೆ ಸಂತೋಷ.

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿಯವರೆಗೆ ಕೊರೆದಿರುವ ಕೊಳವೆ ಬಾವಿಗಳೇ 1 ಲಕ್ಷದ 70 ಸಾವಿರ. ಆದ್ದರಿಂದ 2 ಲಕ್ಷ ಕೊಳವೆ ಬಾವಿಗಳು ದುರಸ್ತಿ ಮಾಡಬೇಕಾಗಿರುತ್ತದೆ ಎಂಬ ಮಾತನ್ನು ಊಹೆ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ತಾವು ಕೊಟ್ಟ ಉತ್ತರ ನಮಗೆ ತೃಪ್ತಿ ತಂದಿದೆ. ದಯಮಾಡಿ, ವಾಟಾಳ್ ನಾಗರಾಜ್‌ರ ಜೊತೆ ಚರ್ಚೆ ಮಾಡಿ, ಅವರ ಹೇಳಿದ ಅಧಿಕಾರಿಯನ್ನು ಕೂಡಲೇ ಕಳುಹಿಸಿ.

ಶ್ರೀ ಎಂ.ಪಿ.ಪ್ರಕಾಶ್: ಅವರು ನಮ್ಮ ಉಪ ಕಾರ್ಯದರ್ಶಿಯವರನ್ನು ಕಳುಹಿಸಿಕೊಡಿ ಎಂದು ಹೇಳಿದರೆ, ನಾನು ನಾಳೆಯೇ ಕಳುಹಿಸಿಕೊಡುತ್ತೇನೆ. ಅವರು ಹೋಗಿ ಒಂದು ದಿವಸ ಅಥವಾ ಎರಡು ದಿವಸದೊಳಗಾಗಿ ವರದಿಯನ್ನು ಕೊಡಬೇಕೆಂದು ಹೇಳುತ್ತೇನೆ ಮತ್ತು ಆ ವರದಿಯ ಪ್ರತಿಯನ್ನೂ ಅವರಿಗೆ ಕೊಡುತ್ತೇನೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ತಾಲ್ಲೂಕಿನಲ್ಲಿ, ಈ ಗಡಿ ಭಾಗದಲ್ಲಿ ವಿದ್ಯುತ್ತಿನ ಸಮಸ್ಯೆ ಬಹಳಷ್ಟಿದೆ. ಈಗ ಎಂ.ಡಬ್ಲ್ಯು.ಎಸ್.ಆಗಲೀ, ಎನ್.ಆರ್.ಡಬ್ಲ್ಯು ಟ್ಯಾಂಕ್ ಆಗಲೀ, ಸರಿಯಾದ ವಿದ್ಯುತ್ ಇಲ್ಲದೇ, ಈ ಸಮಸ್ಯೆಯಿಂದ ಓಡಲಿಕ್ಕೆ ಆಗುತ್ತಾ ಇಲ್ಲ. ಮಾನ್ಯಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಈಗಾಗಲೇ ಮೈಸೂರು ಜಿಲ್ಲಾಪರಿಷತ್ತಿನ ವತಿಯಿಂದ ದುರಸ್ತಿ ಕೆಲಸವನ್ನು ಕೈಗೊಂಡಿದ್ದರೂ ಕೂಡ, ಚಾಮರಾಜನಗರ ಹೊಸದಾಗಿ ಜಿಲ್ಲೆಯಾಗಿ ಘೋಷಣೆಯಾದ ಮೇಲೆ ಹೆಚ್ಚಾಗಿ ನಮ್ಮ ಭಾಗಕ್ಕೆ ಮೆಟೀರಿಯಲ್ಸ್ ಸಪ್ಲೈ ಆಗುತ್ತಾ ಇಲ್ಲ. ಆದ್ದರಿಂದ, ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಆಗುತ್ತಾ ಇಲ್ಲವೆಂದು ನನ್ನ ಅಭಿಪ್ರಾಯ. ಆದಷ್ಟು ಜರೂರಾಗಿ ಈ ದುರಸ್ತಿ ಕಾರ್ಯವನ್ನು ಮಾಡಬೇಕು. ಮತ್ತು ಈ ಭಾಗದಲ್ಲಿ ನೀರಾವರಿ ಇಲ್ಲದೇ ಇರುವ ಪ್ರಯುಕ್ತ ನೀರಿನಮಟ್ಟ ಬಹಳ ಕೆಳಗೆ ಹೋಗಿದೆ. ಅದಕ್ಕಾಗಿ, ಈ ಬಗ್ಗೆ ಮಾನ್ಯಮಂತ್ರಿಗಳು ಹೆಚ್ಚುವರಿಯಾಗಿ ಕೈಪಂಪುಗಳನ್ನು ಮಂಜೂರ್ಮಾಡಿಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಕೈಪಂಪುಗಳನ್ನು ಅಳವಡಿಸುವುದಕ್ಕೆ ಎಲ್ಲಾ ಕಡೆಗೂ ಏರ್ಪಾಡು ಮಾಡುತ್ತೇವೆ ಇನ್ನು ಮೆಟೀರಿಯಲ್ಸ್ ಕಳಿಸಬೇಕಾದ್ದನ್ನು ಕಳಿಸಿಕೊಡುತ್ತೇವೆ.

ಅಧ್ಯಕ್ಷರು: ಪ್ರಶ್ನೆ 26 (3) ಎಂ.ಶಿವಾನಂದ ಅವರ ಪ್ರಶ್ನೆಗೆ, ಸರ್ಕಾರದವರು ಸಮಯ ಕೇಳಿದ್ದಾರೆ.

ರಾಜ್ಯದಲ್ಲಿರುವ ನಗರಸಭೆ ವ್ಯಾಪ್ತಿಯಿಂದ ಹೊರಗುಳಿದು ತಾಲ್ಲೂಕು ಪಂಚಾಯಿತಿಗೂ ಸೇರದ ಹಳ್ಳಿಗಳು

27 (219)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ನಗರಸಭೆ ವ್ಯಾಪ್ತಿಯಿಂದ ಹೊರಗುಳಿದು ತಾಲ್ಲೂಕು ಪಂಚಾಯತಿಗೂ ಸೇರದ ಹಳ್ಳಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ ಈ ತರಹದ ಹಳ್ಳಿಗಳು ಎಷ್ಟು. ಈ ಹಳ್ಳಿಗಳಲ್ಲಿ ಚುನಾವಣೆಯನ್ನು